ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ, ಬೇಲೂರು, ನ್ಯಾಯಾಲಯ, ಬೇಲೂರು.

ಸಿಸಿ ನಂಬರ್ಃ **874/2016**

ಪಿರ್ಯಾದುದಾರರು : ರಾಜ್ಯ ಸರ್ಕಾರದ ಪರವಾಗಿ
ಅಬಕಾರಿ ಇಲಾಖೆ

ವಿರುದ್ಧ

ಆರೋಪಿ : ಶ್ರೀ ಎ.ಬಿ.ಧರ್ಮೇಶ್
ಬಿನ್ ಬೋರೇಗೌಡ, **36** ವರ್ಷ,
ವಾಸಃ-ಅಗಸರಹಳ್ಳಿ ಗ್ರಾಮ, ಕಸಬಾ ಹೋಬಳಿ,
ಬೇಲೂರು ತಾಲ್ಲೂಕು, ಹಾಸನ ಜಿಲ್ಲೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ **313** ರಡಿಯಲ್ಲಿ ಆರೋಪಿ ಹೇಳಿಕೆ

ಪ್ರಶ್ನೆ : **1** : ನ್ಯಾಯಾಲಯದಲ್ಲಿ ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿದಾರರು ನುಡಿದ ಸಾಕ್ಷ್ಯವನ್ನು ಕೇಳಿ ತಿಳಿದುಕೊಂಡಿದ್ದೀರಾ **?**

ಉತ್ತರಃ

ಪ್ರಶ್ನೆ : **2** : ಪ್ರಾಸಾ-**4** ಶ್ರೀ ನವೀನ್ ಕುಮಾರ್ ಎ.ಎಸ್., ಅಬಕಾರಿ ರಕ್ಷಕರು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ **11.09.2015** ರಂದು ಬೆಳಗ್ಗೆ **11.30** ಗಂಟೆ ಸಮಯದಲ್ಲಿ ಅಬಕಾರಿ ನಿರೀಕ್ಷಕರಾದ ಚಾಸಾ-**7** ರವರೊಂದಿಗೆ ನಾನು, ಚಾಸಾ-**4** ಮತುತ ಚಾಸಾ-**5** ರವರು ಬೇಲೂರು ನಗರದ ಅಂಬೇಡ್ಕರ್ ನಗರದಲ್ಲಿ ಗಸ್ತು ನಡೆಸುತ್ತಿದ್ದಾಗ ಮೇಲಾಧಿಕಾರಿಗಳಿಗೆ ಬಂದ ದೂರಿನ ಮೇರೆಗೆ ಅಗಸರಹಳ್ಳಿ ಗ್ರಾಮದ ಆರೋಪಿ ಅಕ್ರಮವಾಗಿ ಕಳ್ಳಭಟ್ಟಿ ತಯಾರಿಸಿ ಮಾರಾಟ ಮಾಡುತ್ತಿರುವುದಾಗಿ ಮಾಹಿತಿ ಬಂದಿರುತ್ತದೆ. ಅಲ್ಲಿ ಬಸ್ಸಿಗಾಗಿ ಕಾಯುತ್ತಿದ್ದ ಪಂಚರುಗಳಾದ ಚಾಸಾ-**1** ಮತ್ತು **2** ರವರಿಗೆ ಬಂದ ವಿಚಾರವನ್ನು ತಿಳಿಸಿ ಪಂಚರಾಗಲು ಕೋರಿದ ಮೇರೆಗೆ ಅವರು ಒಪ್ಪಿಕೊಂಡಿರುತ್ತಾರೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ**?**

ಉತ್ತರ :

ಪ್ರಶ್ನೆ : **3** : ಪ್ರಾಸಾ-**4** ಶ್ರೀ ನವೀನ್ ಕುಮಾರ್ ಎ.ಎಸ್.ರವರು ಮುಂದುವರೆದು, ನಂತರ ಅಲ್ಲಿದ್ದ ಗ್ರಾಮಸ್ಥರನ್ನು ಆರೋಪಿ ಮನೆಯನ್ನು ತೋರಿಸಲು ಕೇಳಿದಾಗ ಗ್ರಾಮಸ್ಥರು ಮನೆ ತೋರಿಸಿದ್ದು, ಮನೆ ಬೀಗ ಹಾಕಿತ್ತು. ಮನೆಯ ಸುತ್ತ ಮುತ್ತ ಪರಿಶೀಲಿಸಲಾಗಿ ಮನೆಯ ಹಿಂಭಾಗದ ಟ್ರ್ಯಾಕ್ಟರ್ ಶೆಡ್ ನ ಪಕ್ಕದ ದನದ ಕೊಟ್ಟಿಗೆಯಲ್ಲಿ ಬೆಲ್ಲದ ಕೊಳೆ ಕಂಡುಬಂದಿರುತ್ತದೆ. ನ್ಯಾಯಾಲಯದಿಂದ ಸರ್ಚ್ ವಾರೆಂಟ್ ಪಡೆಯಲು ಕಾಲಾವಕಾಶ ಇಲ್ಲದಿದ್ದರಿಂದ ಕರ್ನಾಟಕ ಅಬಕಾರಿ ಕಾಯ್ದೆ ಕಲಂ **54** ರ ರೀತ್ಯಾ ಶೋಧನ ಸಮುಚಿತ ಆಧಾರವನ್ನು ತಯಾರಿಸಿಕೊಂಡಿರುತ್ತೇವೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ?

ಉತ್ತರ :

ಪ್ರಶ್ನೆ : **4** : ಪ್ರಾಸಾ-**4** ಶ್ರೀ ನವೀನ್ ಕುಮಾರ್ ಎ.ಎಸ್.ರವರು ಮುಂದುವರೆದು, ನಂತರ ಅಂಗಶೋಧನೆ ಮಾಡಿಕೊಂಡು ದನದ ಕೊಟ್ಟಿಗೆಯನ್ನು ಶೋಧಿಸಿದಾಗ **15** ಲೀ ಸಾಮರ್ಥ್ಯದ **2** ಕೊಡಗಳಲ್ಲಿ ಒಟ್ಟು **30** ಲೀ ಬೆಲ್ಲದ ಕೊಳೆ, **10** ಲೀ ಸಾಮರ್ಥ್ಯದ ಕ್ಯಾನಿನಲ್ಲಿ **3** ಲೀ ಕಳ್ಳಭಟ್ಟಿ ಸಾರಾಯಿ ಕಂಡುಬಂದಿರುತ್ತದೆ. ಇವುಗಳ ಪೈಕಿ ಕಳ್ಳಭಟ್ಟಿ ಸಾರಾಯಿಂದ **500** ಎಂ.ಎಲ್.ಹಾಗೂ ಬೆಲ್ಲದ ಕೊಳೆಯ **2** ಕೊಡಗಳಿಂದ ತಲಾ **500** ಎಂ.ಎಲ್.ನಂತೆ ರಾಸಾಯನಿಕ ಪರೀಕ್ಷೆಗೆ ಮಾದರಿ ತೆಗೆದು ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ಇಲಾಖಾ ಸೀಲ್ **336** ರಿಂದ ಮೊಹರು ಮಾಡಿ ಚಿಕ್ಕ ಚೀಟಿಗಳಲ್ಲಿ ವಿವರ ಬರೆದು ಪಂಚರುಗಳು ಹಾಗೂ ಅಧಿಕಾರಿಗಳ ಸಹಿ ಪಡೆದು ಸೀಸೆಗಳಿಗೆ ಹಾಗೂ ಮುದ್ದೆ ಮಾಲುಗಳಿಗೆ ಅಂಟಿಸಿ ಹಾಗೂ ಮಾದರಿ ಸೀಲಿನ ನಕಲನ್ನು ಅಲ್ಲೇ ತಯಾರಿಸಲಾಯಿತು ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ?

ಉತ್ತರ :

ಪ್ರಶ್ನೆ : **5** : ಪ್ರಾಸಾ-**4** ಶ್ರೀ ನವೀನ್ ಕುಮಾರ್ ಎ.ಎಸ್.ರವರು ಮುಂದುವರೆದು, ನಂತರ ಚೆಕ್ಕು ಬಂದಿಯನ್ನು ನೋಡಲಾಗಿ ಪೂರ್ವ, ಪಶ್ಚಿಮ ಮತ್ತು ದಕ್ಷಿಣಕ್ಕೆ ಆರೋಪಿಗೆ ಸೇರಿದ ಜಾಗ, ಉತ್ತರಕ್ಕೆ ಬೇಲಿ ಇರುತ್ತದೆ. ಈ ಸ್ಥಳ ಮಹಜರ್ ಅನ್ನು ಮಧ್ಯಾಹ್ನ **12.45** ರಿಂದ **1.45** ರವರೆಗೆ ಬರೆದಿರುತ್ತೇವೆ. ನಂತರ ರಾಸಾಯನಿಕ ಪರೀಕ್ಷೆಗೆ ತೆಗೆದ ಮಾದರಿಯನ್ನು ದಿನಾಂಕ **06.10.2015** ರಂದು ಬೆಂಗಳೂರಿನ ರಾಸಾಯನಿಕ

ಪ್ರಯೋಗಾಲಯಕ್ಕೆ ತೆಗೆದುಕೊಂಡು ಹೋಗಿ ದಿನಾಂಕ **16.10.2015** ರಂದು ರಾಸಾಯನಿಕ ವರದಿಯನ್ನು ಹಾಗೂ ಮುದ್ದೆಮಾಲುಗಳನ್ನು ತಂದಿರುತ್ತೇವೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ**?**

ಉತ್ತರ **:**

ಪ್ರಶ್ನೆ **: 6 :** ಪ್ರಾಸಾ**-5** ಶ್ರೀ ಹರ್ಷ ಕೆ., ಪಿಡಿಒ, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಅಬಕಾರಿ ಪೊಲೀಸರು ಎ.ಬಿ.ಧರ್ಮೇಶ್ ರವರ ಮನೆಯ ಮಾಲೀಕತ್ವ ಕೋರಿ ದಾಖಲೆ ನೀಡುವಂತೆ ಮನವಿ ಪತ್ರ ಕೊಟ್ಟಿದ್ದು, ಆ ಬಗ್ಗೆ ನಾನು ಸದರಿ ಮನೆ ಆರೋಪಿ ತಂದೆ ಹೆಸರಿನಲ್ಲಿ ಇರುವ ಬಗ್ಗೆ ದೃಢೀಕರಣ ಪತ್ರ ನೀಡಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ**?**

ಉತ್ತರ **:**

ಪ್ರಶ್ನೆ **: 7 :** ಪ್ರಾಸಾ**-6** ಶ್ರೀ ಕೃಷ್ಣಮೂರ್ತಿ, ಅಬಕಾರಿ ನಿರೀಕ್ಷಕರು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ **11.09.2015** ರಂದು ಬೆಳಗ್ಗೆ **11.00** ಗಂಟೆ ಸಮಯದಲ್ಲಿ ಸರ್ಕಾರಿ ವಾಹನ ಸಂಖ್ಯೆ ಕೆಎ **13** ಜಿ **645** ರಲ್ಲಿ ಸಿಬ್ಬಂದಿಯಾದ ಚಾಸಾ**-3** ರಿಂದ **5** ರವರೊಂದಿಗೆ ಗಸ್ತು ಮಾಡುತ್ತಿದ್ದಾಗ ಧರ್ಮೇಶ್ ಬಿನ್ ಬೋರೇಗೌಡ ಅಕ್ರಮವಾಗಿ ಕಳ್ಳಭಟ್ಟಿಯನ್ನು ತಯಾರಿಸುತ್ತಿದ್ದಾರೆ ಎಂದು ಮಾಹಿತಿ ಬಂದಿರುತ್ತದೆ. ಸದರಿ ಮಾಹಿತಿ ಮೇರಗೆ ಅಂಬೇಡ್ಕರ್ ಸರ್ಕಲ್ ಹತ್ತಿರ ಬಂದು ಚಾಸಾ**-1** ಮತ್ತು **2** ರವರಿಗೆ ಬಂದ ವಿಷಯ ತಿಳಿಸಿ ಮನೆಯನ್ನು ಶೋಧನೆ ಮಾಡುವ ಸಮಯದಲ್ಲಿ ನಮ್ಮೊಂದಿಗೆ ಬರಬೇಕೆಂದು ಅವರಿಗೆ ತಿಳಿಸಿದಾಗ ಅವರು ಒಪ್ಪಿಕೊಂಡಿರುತ್ತಾರೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ**?**

ಉತ್ತರ **:**

ಪ್ರಶ್ನೆ **: 8 :** ಪ್ರಾಸಾ**-6** ಶ್ರೀ ಕೃಷ್ಣಮೂರ್ತಿರವರು ಮುಂದುವರೆದು, ನಂತರ ಅಗಸರಹಳ್ಳಿ ಗ್ರಾಮಕ್ಕೆ ಹೋಗಿ ಗ್ರಾಮಸ್ಥರನ್ನು ಪಂಚರನ್ನಾಗಿ ಸಹಕರಿಸುವಂತೆ ಕೋರಿದಾಗ ಅವರು ನಿರಾಕರಿಸಿರುತ್ತಾರೆ. ಗ್ರಾಮಸ್ಥರು ಧರ್ಮೇಶ್ ರವರ ಮನೆಯನ್ನು ತೋರಿಸಿರುತ್ತಾರೆ. ಮನೆಯ ಬಾಗಿಲು ಬೀಗ ಹಾಕಿದ್ದು, ಕಾರ್ ಶೆಡ್ ನ ಪಕ್ಕದಲ್ಲಿ ಘಾಟು ವಾಸನೆ ಬಂದಿದ್ದು, ಶೋಧನೆ ಮಾಡಲು ಸಮಯಾವಕಾಶ ಇಲ್ಲದ ಕಾರಣ

ಶೋಧನ ಸಮುಚಿತ ಆಧಾರವನ್ನು ತಯಾರಿಸಿ ದನದ ಕೊಟ್ಟಿಗೆ ಎಡಭಾಗದಲ್ಲಿ ಶೋಧಿಸಿದಾಗ ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನ್ ನಲ್ಲಿ ಸುಮಾರು **3** ಲೀ ನಷ್ಟು ಕಳ್ಳಭಟ್ಟಿ ಸಾರಾಯಿ ಇರುವುದು ಹಾಗೂ **2** ಪ್ಲಾಸ್ಟಿಕ್ ಕೊಡಗಳಲ್ಲಿ **15** ಲೀ ನಂತೆ **30** ಲೀ ನಷ್ಟು ಬೆಲ್ಲದ ಕೊಳೆ ಇರುವುದು ಕಂಡುಬಂದಿರುತ್ತದೆ. ಕಳ್ಳಭಟ್ಟಿ ತಯಾರಿಸಲು ಉಪಯೋಗಿಸುವ ಅಲ್ಯೂಮಿನಿಯಂ ಪಾತ್ರೆ ಕಂಡುಬಂದಿರುತ್ತದೆ. ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ**?**

ಉತ್ತರ ಃ

ಪ್ರಶ್ನೆ ಃ **9** ಃ ಪ್ರಾಸಾ-**6** ಶ್ರೀ ಕೃಷ್ಣಮೂರ್ತಿರವರು ಮುಂದುವರೆದು, ನಂತರ ಎಫ್.ಎಸ್.ಎಲ್.ಗಾಗಿ ಕಳ್ಳಭಟ್ಟಿ ಸಾರಾಯಿಯಿಂದ **500** ಎಂ.ಎಲ್ ಮತ್ತು ಬೆಲ್ಲದ ಕೊಳೆಯಿಂದ ತಲಾ **500** ಎಂ.ಎಲ್ ನಷ್ಟು ರಾಸಾಯನಿಕ ಪರೀಕ್ಷೆಗೆ ಮಾದರಿ ತೆಗೆದು ಮಾದರಿ ಚೀಟಿ ತಯಾರಿಸಿ ಪಂಚರ ಸಹಿ ಪಡೆದು ಸ್ವತ್ತುಗಳಿಗೆ ಅಂಟಿಸಲಾಯಿತು. ನಂತರ ದಾರದಿಂದ ಕಟ್ಟಿ ಬಟ್ಟೆಯಿಂದ ಸುತ್ತಿ ಇಲಾಖಾ ಸೀಲಿನಿಂದ ಸೀಲು ಮಾಡಲಾಯಿತು. ನಂತರ ಆರೋಪಿಯನ್ನು ಕಚೇರಿಗೆ ತಂದು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಮಹಜರ್ ಅನ್ನು ಮಧ್ಯಾಹ್ನ **12.40** ರಿಂದ **1.45** ರವರೆಗೆ ತಯಾರಿಸಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ**?**

ಉತ್ತರ ಃ

ಪ್ರಶ್ನೆ ಃ **10** ಃ ಪ್ರಾಸಾ-**6** ಶ್ರೀ ಕೃಷ್ಣಮೂರ್ತಿರವರು ಮುಂದುವರೆದು, ವಶಪಡಿಸಿಕೊಂಡ ಸ್ವತ್ತುಗಳನ್ನು ಇಲಾಖಾ ವಶಕ್ಕೆ ಪಡೆದು ಆರೋಪಿ ವಿರುದ್ಧ ಪ್ರಕರಣ ದಾಖಲಿಸಿರುತ್ತೇನೆ. ದಿನಾಂಕ **28.09.2015** ರಂದು ಆರೋಪಿ ಮನೆಯ ಮಾಲೀಕತ್ವ ಕೋರಿ ಎಂ.ಸಂಧಿ ಗ್ರಾಮ ಪಂಚಾಯಿತಿಗೆ ಪತ್ರ ಬರೆದಿರುತ್ತೇನೆ. ದಿನಾಂಕ **06.10.2015** ರಂದು ಚಾಸಾ-**3** ರವರ ಮೂಲಕ ಮಾದರಿಗಳನ್ನು ಕೇಂದ್ರ ರಾಸಾಯನಿಕ ಪರೀಕ್ಷಕರು ಬೆಂಗಳೂರು ಇವರಿಗೆ ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ**?**

ಉತ್ತರ ಃ

ಪ್ರಶ್ನೆ ಃ **11** ಃ ಪ್ರಾಸಾ-**6** ಶ್ರೀ ಕೃಷ್ಣಮೂರ್ತಿರವರು ಮುಂದುವರೆದು, ದಿನಾಂಕ **16.10.2015** ರಂದು ರಾಸಾಯನಿಕ ಪರೀಕ್ಷಾ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿನಾಂಕ **09.12.2015** ರಂದು ಆರೋಪಿ ತಂದೆಯ ಹೆಸರಿನಲ್ಲಿದ್ದ ಮನೆಗೆ ಸಂಬಂದಿಸಿದ ಮಾಲೀಕತ್ವ ದೃಢೀಕರಣ ಪತ್ರವನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ತನಿಖೆ ಪೂರ್ಣಗೊಂಡ ನಂತರ ಆರೋಪಿ ವಿರುದ್ದ ದೋಷಾರೋಪಣಾ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ಸಾಕ್ಷ್ಯವನ್ನು ನುಡಿದಿರುತ್ತಾರೆ. ಇದರ ಬಗ್ಗೆ ನೀವೇನಾದರೂ ಹೇಳುವುದು ಇದೆಯಾ?

ಉತ್ತರ ಃ

ಪ್ರಶ್ನೆ ಃ **12** ಃ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನೀವೇನಾದರೂ ಹೇಳುವುದು ಇದೆಯಾ?
ಉತ್ತರ ಃ

ಪ್ರಶ್ನೆ ಃ **13** ಃ ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯಾ?

ಉತ್ತರ ಃ

ಪ್ರಶ್ನೆ ಃ **14** ಃ ನಿಮ್ಮ ಪರವಾಗಿ ಯಾವುದಾದರೂ ದಾಖಲಾತಿಯನ್ನು ಹಾಜರು ಪಡಿಸುವಿರಾ?
ಉತ್ತರ ಃ

(ಮೇಲ್ಕಂಡ ಅಂಶಗಳನ್ನು ಆರೋಪಿತರಿಗೆ ಓದಿ ಹೇಳಿ ನಂತರ ಅವರು ನೀಡಿದ ಉತ್ತರವನ್ನು ಬರೆದುಕೊಂಡು ಸರಿಯಾಗಿದೆ ಎಂದು ಧೃಡೀಕರಿಸಿದೆ)

ದಿನಾಂಕ ಃ **06.03.2026**
ಸ್ಥಳ ಃ ಬೇಲೂರು

(ಶ್ರೀ.ನಾಗೇಂದ್ರ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ಬೇಲೂರು.